## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 908
2. ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್.
3. ಉತ್ತರಿಸುವ ದಿನಾಂಕ : 13/12/2023
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕೆ.ಆರ್.ವೃತ್ತದ ಪಕ್ಕದಲ್ಲಿನ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಕಟ್ಟಡವನ್ನು ಕರ್ನಾಟಕ ಇಂಜಿನಿಯರ್ ಸೇವಾ ಸಂಘವು ಕಡಿಮೆ ಬಾಡಿಗೆಗೆ ಗುತ್ತಿಗೆ ಪಡೆದು ವಾಣಿಜ್ಯ ಉದ್ದೇಶಕ್ಕಾಗಿ ಉಪ ಬಾಡಿಗೆ ನೀಡುತ್ತಿರುವ ಬಗ್ಗೆ ದೂರುಗಳು ದಾಖಲಾಗಿವೆಯೇ; | ದಾಖಲಾಗಿದೆ. |
| ಆ) | ಹಾಗಿದ್ದಲ್ಲಿ; ಈ ಸಂಬಂಧ ದಾಖಲಾದ ದೂರುಗಳ ಪ್ರಸ್ತುತ ಸ್ಥಿತಿಯ ಮಾಹಿತಿ ನೀಡುವುದು; ಅದು ಯಾವ ಹಂತದಲ್ಲಿವೆ; ದೂರುಗಳ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಈ ದೂರಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದು, ಕರ್ನಾಟಕ ಇಂಜಿನಿಯರ್ ಸೇವಾ ಸಂಘವು ಈವರೆಗೆ ಯಾರಿಗೂ ವಾಣಿಜ್ಯ ಉದ್ದೇಶಕ್ಕಾಗಿ ಉಪಬಾಡಿಗೆ ನೀಡಿರುವುದು ಕಂಡು ಬಂದಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. |
| ಇ) | ಕರ್ನಾಟಕ ಇಂಜಿನಿಯರ್ ಸೇವಾ ಸಂಘವು ಸರ್ಕಾರದ ಕರಾರು ಉಲ್ಲಂಘಿಸುತ್ತಿರುವುದರಿಂದ ಇದರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ಇಂಜಿನಿಯರ್ ಸೇವಾ ಸಂಘವು ಯಾವುದೇ ಕರಾರನ್ನು ಉಲ್ಲಂಘಿಸಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಸಂಭವ ಉದ್ಭವಿಸುವುದಿಲ್ಲ. |
| ಈ) | ಸದರಿ ಕಟ್ಟಡಕ್ಕೆ ನೂತನ ಮಾರ್ಗಸೂಚಿ ದರದಂತೆ ಬಾಡಿಗೆ ನಿಗಧಿಗೊಳಿಸಲಾಗಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಲೋಇ 37 ಬಿಎಂಎಸ್ 2022, ಬೆಂಗಳೂರು ದಿನಾಂಕ:28.02.2023 ರಲ್ಲಿ ಅನುಮೋದಿಸಿರುವಂತೆ, ಆಯಾ ಸಾಲಿನ ಸಂಘದ ಒಟ್ಟು ವಾರ್ಷಿಕ ಆದಾಯದ ಶೇ.2% ರಷ್ಟು ಮೊತ್ತವನ್ನು ಲೀಸ್/ಬಾಡಿಗೆ ಮೊತ್ತವಾಗಿ ನಿಗಧಿ ಪಡಿಸಲಾಗಿದೆ. |

ಸಂಖ್ಯೆ: ಲೋಇ 46 ಬಿಎಲ್ ಕ್ಯೂ 2023

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು